## ಸಂಪತ್ತು ವೃದ್ಧಿಗೆ ಅಸೆಟ್ ಅಲೊಕೇಶನ್ ಮುಖ್ಯ



ಹೆಚ್ಚು ಶ್ರಮವಿಲ್ಲದೆ ಷೇರುಪೇಟೆಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಮ್ಯೂಚುವಲ್ ಫಂಡ್‌ಗಳು ಕಲ್ಪಿಸಿಕೊಟ್ಟಿವೆ. ನಿಮಗೆ ಡ್ರೈವಿಂಗ್ ಬರಲ್ಲ ಅಂದ್ರೂ ಬಸ್ ಹತ್ತಿ ನಿಮ್ಮಿಷ್ಟದ ಊರಿಗೆ ಹೋಗುವುದಿಲ್ಲವೇ? ಇದೂ ಹಾಗೆಯೇ. ನಿಮಗೆ ಷೇರುಪೇಟೆಯ ಮೇಲೆ ನಿಗಾ ಇರಿಸುವ ಸಾಮರ್ಥ್ಯ, ಅವಕಾಶ ಇಲ್ಲದಿದ್ದಾಗಲೂ ಅದರ ಲಾಭವನ್ನು ಮ್ಯೂಚುವಲ್ ಫಂಡ್‌ಗಳು ದಕ್ಕಿಸಿಕೊಡುತ್ತವೆ.

ನಿಮಗೇ ನೇರವಾಗಿ ಷೇರು ವಹಿವಾಟಿನಲ್ಲಿ ಪಾಲ್ಗೊಳ್ಳುವ ಸಾಮರ್ಥ್ಯವಿದ್ದರೆ ಒಳ್ಳೆಯದೇ ಆಯಿತು. ಆಗಲೂ ಅಸೆಟ್ ಅಲೊಕೇಶನ್ ಬಗ್ಗೆ ಎಚ್ಚರವಿರಬೇಕು. ಒಟ್ಟು ಹೂಡಿಕೆಯ ಶೇ 10ರಷ್ಟನ್ನು ಚಿನ್ನದ ಮೇಲೆ, ಶೇ 10ರಷ್ಟು ವಿದೇಶಿ ಹೂಡಿಕೆಗೆ ತೊಡಗಿಸುವುದು ಜಾಣತನ. ಉಳಿದ ಶೇ 30ರಷ್ಟನ್ನು ಸಣ್ಣ ಮತ್ತು ಮಧ್ಯಮ ಗಾತ್ರದ ಕಂಪನಿಗಳ ಮೇಲೆ ಹೂಡಿ, ಶೇ 50ರಷ್ಟನ್ನು ದೊಡ್ಡಮಟ್ಟದ ಸುಭದ್ರ ಕಂಪನಿಗಳ ಮೇಲೆ ಹೂಡಿಕೆ ಮಾಡಬೇಕು.

ಹೊಸದಾಗಿ ವಹಿವಾಟು ಆರಂಭಿಸುವವರು ಡೇ ಟ್ರೇಡಿಂಗ್, ಫ್ಯೂಚರ್ ಅಂಡ್ ಆಪ್ಷನ್‌ಗಳಿಂದ ದೂರವಿರುವುದು ಕ್ಷೇಮ. ಕ್ಯಾಶ್ ವ್ಯವಹಾರದಿಂದಲೇ ವಹಿವಾಟು ಆರಂಭಿಸಬೇಕು. ಆಮೇಲೆ ಬಿಟಿಎಸ್‌ಟಿಗೆ ಹೊರಳಬಹುದು. ಮಾಹಿತಿ ಎಲ್ಲ ಕಡೆ ಸಿಗ್ತಿದೆ. ಆದರೆ ಅದನ್ನು ಅನ್ವಯಿಸಿ ವಿವರಿಸುವವರು ಬೇಕಲ್ಲವೇ? ಒಂದು ಮಟ್ಟಿಗಿನ ಹಿಡಿದ ಸಿಗುವವರೆಗಾದರೂ ಹಣಕಾಸು ಸಲಹೆಗಾರರ ಸಲಹೆಯಂತೆ ವ್ಯವಸ್ಥಿತವಾಗಿ ಮುನ್ನಡೆಯುವುದು ಒಳಿತು.

ನಿಮ್ಮ ಒಳಿತು ಆಲೋಚಿಸುವವರಿಗೆ ಶುಲ್ಕ ಕೊಡಲು ಎಂದಿಗೂ ಚೌಕಾಸಿ ಮಾಡಬೇಡಿ. ಆಗಲೇ ಅವರು ನಿಮ್ಮ ಯಶಸ್ಸಿಗೆ ಬೆಂಬಲವಾಗಿ ನಿಲ್ಲುತ್ತಾರೆ.

**-ಶರಣ್ ಪಾಟೀಲ್**

**ವ್ಯವಸ್ಥಾಪಕ ನಿರ್ದೇಶಕ, ಇನ್‌ಸ್ಪೈರ್ ಇಂಡಿಯಾ ಫೈನಾನ್ಶಿಯಲ್ ಸಲ್ಯೂಷನ್ಸ್**



## ಟ್ರೇಡ್ ಮಾಡುವ ಮುನ್ನ ಇರಲಿ ಎಚ್ಚರ.

ಆರ್‌ಬಿಐ ನೀತಿಗಳು, ಅಷ್ಟೇಕೆ ವಿಶ್ವದ ಅರ್ಥವ್ಯವಸ್ಥೆ, ವಿವಿಧ ದೇಶಗಳೊಂದಿಗೆ ನಾವು ಹೊಂದಿರುವ ರಾಜತಾಂತ್ರಿಕ ಸಂಬಂಧಗಳೂ ಪ್ರಭಾವಿಸುತ್ತವೆ. ಪರಿಶ್ರಮವೇ ಇಲ್ಲದೆ ಇಷ್ಟೆಲ್ಲಾ ಆಳದ ಜ್ಞಾನ ಹೇಗೆ ದಕ್ಕಲು ಸಾಧ್ಯ' ಎಂದು ಪ್ರಶ್ನಿಸುತ್ತಾರೆ ಅವರು.

ಷೇರುಪೇಟೆಯಲ್ಲಿ ಸಕ್ರಿಯರಾಗಿರುವವರು ಸದಾ ಪ್ರಚಲಿತ ವಿದ್ಯಮಾನಗಳನ್ನು ಗಮನಿಸುತ್ತಿರಬೇಕು. ಪತ್ರಿಕೆಗಳನ್ನು, ಆರ್ಥಿಕ ವಿಶ್ಲೇಷಣೆಗಳನ್ನು ಓದಬೇಕು. ಮುಂಗಾರು ಚೆನ್ನಾಗಿದ್ದರೆ ಕೃಷಿ ಆಧರಿತ ಕಂಪನಿಗಳು, ವಾಹನ ಸಾಲಕ್ಕೆ ರಿಯಾಯ್ತಿ ಘೋಷಣೆಯಾದರೆ ವಾಹನ ಉತ್ಪಾದಿಸುವ ಕಂಪನಿಗಳು, ಜನರ ಆರ್ಥಿಕ ಸ್ಥಿತಿ ಸುಧಾರಿಸಿ ಉದ್ಯೋಗಾವಕಾಶಗಳು ಹೆಚ್ಚಾದರೆ ಸಾಲ ಮರುಪಾವತಿ ಚೆನ್ನಾಗಿ ಆಗುವ ಭರವಸೆ ಸಿಕ್ಕಂತೆ – ಇದು ಬ್ಯಾಂಕಿಂಗ್ ಮತ್ತು ಎಫ್‌ಎಂಸಿಜಿಗೆ ಪೂರಕ. ಗಡಿಯಲ್ಲಿ ಗಡಿಬಿಡಿ ಹೆಚ್ಚಾದರೆ ಡಿಫೆನ್ಸ್ ವಲಯದ ಕಂಪನಿಗಳಿಗೆ, ಕೋವಿಡ್‌ಗೆ ಔಷಧಿ ಬಂದರೆ ಫಾರ್ಮಾ ಕಂಪನಿಗಳಿಗೆ, ಚಿನ್ನದ ಬೆಲೆ ಹೆಚ್ಚಾದರೆ ಗೋಲ್ಡ್‌ಲೋನ್ ಕಂಪನಿಗಳಿಗೆ ಹಬ್ಬ. ಪೇಟೆಯಲ್ಲಿ ಬದುಕಬೇಕು ಎನ್ನುವವರು ಹೀಗೆ ಎಲ್ಲ ಥರದ ವಿದ್ಯಮಾನಗಳ ಮೇಲೂ ಕಣ್ಣಿಟ್ಟಿರಬೇಕು.

ವೈವಿಧ್ಯಮಯ ಕಂಪನಿಗಳ ಬ್ಯಾಲೆನ್ಸ್‌ಶೀಟ್ ಗಮನಿಸಿ, ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಪೇಟೆಗೆ ಬರುವವರು ರೂಢಿಸಿಕೊಳ್ಳಬೇಕಾದ ಮತ್ತೊಂದು ಮುಖ್ಯ ಕೌಶಲ. ಹೆಚ್ಚು ಉದ್ಯೋಗಿಗಳು ಕೆಲಸ ಬಿಡುತ್ತಿಲ್ಲ ಎಂದರೆ ಐಟಿ ಕಂಪನಿಗಳ ಮೌಲ್ಯ ಹೆಚ್ಚು. ಸಾಲಕ್ಕೂ ಠೇವಣಿಗೂ ಸುರಕ್ಷಿತ ಅಂತರವಿದ್ದರೆ ಬ್ಯಾಂಕಿಂಗ್ ಕಂಪನಿಗಳ ಮೌಲ್ಯ ಹೆಚ್ಚು. ಅದೇ ರೀತಿ ಮೀಸಲು ನಿಧಿ, ದುಡಿಮೆಯ ಬಂಡವಾಳ, ಎಂಥ ಯೋಜನೆಗಳ ಮೇಲೆ ಕಂಪನಿ ಹಣ ತೊಡಗಿಸುತ್ತಿದೆ, ಅವುಗಳಿಂದ ನಿರೀಕ್ಷಿಸಿರುವ ಆದಾಯವೆಷ್ಟು, ಮುಖ್ಯ ವ್ಯಾಪಾರದಿಂದ ಗಳಿಕೆಯೆಷ್ಟು, ಆ ಕಂಪನಿಯ ಇತರೆ ಚಟುವಟಿಕೆಗಳಿಂದ ಎಷ್ಟು ಆದಾಯ ಬರುತ್ತಿದೆ ಹೀಗೆ ಹಲವು ಇಣುಕುನೋಟಗಳನ್ನು ಅರಿತುಕೊಳ್ಳಲು ಬ್ಯಾಲೆನ್ಸ್‌ಶೀಟ್ ಉತ್ತಮ ಆಕರ.

ಬ್ಯಾಲೆನ್ಸ್ ನೋಡುವ ವ್ಯವಧಾನವಿಲ್ಲದವರು ದೀರ್ಘಾವಧಿ ಹೂಡಿಕೆದಾರರಾಗಿ, ಗ್ರಾಫ್ ಗಮನಿಸುವ ತಾಳ್ಮೆಯಿಲ್ಲದವರು ಟ್ರೇಡರ್‌ಗಳಾಗಿ ಯಶಸ್ವಿಯಾಗುವುದು ಬಲುಕಷ್ಟ. ಷೇರುಪೇಟೆಯಲ್ಲಿ ಸಮಚಿತ್ತ ಎಲ್ಲಕ್ಕಿಂತ ಮುಖ್ಯ. ಅದು ಬೆಳೆಯಲು ಅಧ್ಯಯನ ಅತ್ಯಗತ್ಯ.

### ನಮ್ಮನ್ನು ನಾವು ಅರಿವುದು ಹೇಗೆ?

ಪ್ರತಿಯೊಬ್ಬರ ಹೂಡಿಕೆ ಶೈಲಿಯೂ ಭಿನ್ನ. ನಮ್ಮ ಪ್ರತಿ ವರ್ತನೆಯನ್ನೂ ನಮ್ಮ ಸ್ವಭಾವಗಳು ನಿರ್ಧರಿಸುತ್ತವೆ. ಈ ಲೇಖನದ ಆರಂಭದಲ್ಲಿ ಪ್ರಸ್ತಾಪಿಸಿದ ಪ್ರಶ್ನೆಯನ್ನು ಇನ್ನೊಮ್ಮೆ ಓದಿನೋಡಿ.

'ನಿಮ್ಮ ಹತ್ತಿರ ಇದ್ದ 10 ಲಕ್ಷ ರೂಪಾಯಿ ಷೇರುಪೇಟೆಯಲ್ಲಿ ಹೂಡಿಕೆ ಮಾಡಿದ್ದೀರಿ ಅಂದುಕೊಳ್ಳಿ. ನೀವು ಖರೀದಿಸಿದ್ದ ಷೇರುಗಳ ಮೌಲ್ಯ 5 ಲಕ್ಷಕ್ಕೆ ಬಂದಿದೆ. ನಿಮ್ಮ ಮುಂದಿನ ನಡೆಯೇನು?' ಈ ಪ್ರಶ್ನೆಗೆ ನೀವು ಕೊಡುವ ಉತ್ತರ ನಿಮ್ಮ ಈಗಿನ ಹಣಕಾಸು ಪರಿಸ್ಥಿತಿಗೂ ಕನ್ನಡಿ ಹಿಡಿಯುತ್ತದೆ.

ನೆಮ್ಮದಿಯ ಬದುಕಿಗಾಗಿ ಹಣ ಸಂಪಾದಿಸಬೇಕು. ಆದರೆ ಹಣ ಸಂಪಾದಿಸುವ ಮಾರ್ಗವೇ ನೆಮ್ಮದಿಯನ್ನು ಕಿತ್ತುಕೊಳ್ಳುವುದಾಗಿದ್ದರೆ ಸಂಪಾದಿಸುವ ಹಣಕ್ಕೆ ಅರ್ಥವಾದರೂ ಏನು? 'ನಿಮ್ಮ ಸ್ವಭಾವಗಳನ್ನು ಅರ್ಥಮಾಡಿಕೊಂಡು, ಅದಕ್ಕೆ ಅನುಗುಣವಾಗಿಯೇ ಹೂಡಿಕೆ ನಿರ್ಧಾರ ತೆಗೆದುಕೊಳ್ಳಬೇಕು' ಎನ್ನುವುದು ಷೇರುಪೇಟೆಯ ಅನುಭವಿಗಳ